ಜಯಣ್ಣ ಅವರು, 'ಗ್ರಾಮಾಂತರ ಭಾಗದವರೂ ಕಷ್ಟಪಟ್ಟು ಓದಿ, ಯುಪಿಎಸ್‌ಸಿ ಪರೀಕ್ಷೆ ಪಾಸು ಮಾಡಬೇಕು. ನಿನ್ನನ್ನು ಐಎಎಸ್ ಹುದ್ದೆಯಲ್ಲಿ ನೋಡಲು ಇಷ್ಟಪಡುವೆ' ಎಂದಿದ್ದರಂತೆ. 'ತಂದೆಯ ಆ ಮಾತೇ ನನ್ನನ್ನು ಯಶಸ್ಸಿನ ಹಾದಿಯಲ್ಲಿ ಗುರಿ ಮುಟ್ಟಿಸಿತು' ಎಂದು ಅವರು ಹೇಳುತ್ತಾರೆ.

ದೇಶಕ್ಕೆ 139ನೇ ಹಾಗೂ ರಾಜ್ಯಕ್ಕೆ ನಾಲ್ಕನೇ ರ‍್ಯಾಂಕ್ ಪಡೆದ ನಿಖಿಲ್ ಪಾಟೀಲ ಅವರು ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲ್ಲೂಕಿನ ಲಕ್ಕುಂಡಿ (ಅತ್ತಿಮಬ್ಬೆಯ ಲಕ್ಕುಂಡಿ ಅಲ್ಲ!) ಎಂಬ ಸಣ್ಣ ಗ್ರಾಮದವರು. 'ನನ್ನ ಯಶಸ್ಸಿನ ಹಿಂದೆ ನಾಲ್ಕು ದೊಡ್ಡ ಸೋಲುಗಳಿವೆ. ಸೋಲುಗಳಿಂದ ನಿರಾಶನಾಗಲಿಲ್ಲ. ಧೃತಿಗೆಡಲಿಲ್ಲ. ಪ್ರತಿ ಸೋಲಿನಿಂದಲೂ ಪಾಠ ಕಲಿತೆ. ಪ್ರತಿ ಬಾರಿ ನನ್ನ ಸಂಪೂರ್ಣ ಸಾಮರ್ಥ್ಯವನ್ನು ಹಾಕಿದೆ. ನನ್ನ ಮೇಲಿನ ವಿಶ್ವಾಸವನ್ನು ಕಳೆದುಕೊಳ್ಳಲಿಲ್ಲ. ಕೊನೆಗೂ ಯಶಸ್ಸು ಒಲಿದುಬಂತು' ಎಂದು ಅವರು ಅಭಿಮಾನದಿಂದ ಬೀಗುತ್ತಾರೆ. ತನ್ನ ನೆಲದ ಹುಡುಗನ ಈ ಯಶಸ್ಸಿನಿಂದ ತಾಳಿಕೋಟೆ ಎಷ್ಟೊಂದು ಬೀಗಿದೆ ಎಂದರೆ ನಿಖಿಲ್‌ಗೆ ಅವರ ಕುಟುಂಬದವರೊಟ್ಟಿಗೆ ನಾಗರಿಕ ಸನ್ಮಾನವನ್ನೂ ಮಾಡಿದೆ. ನಿಖಿಲ್ ಅವರನ್ನು ತನ್ನ ಪ್ರದೇಶದ ಮಾದರಿ ಯುವಕನನ್ನಾಗಿ ಈ ಊರು ಕಂಡಿದೆ.

250ನೇ ರ‍್ಯಾಂಕ್ ಗಳಿಸಿದ ಸಾಹಿತ್ಯ ಆಲದಕಟ್ಟಿ ಕೂಡ ಬೆಳಗಾವಿ ಜಿಲ್ಲೆಯ ಬೈಲಹೊಂಗಲದಂತಹ ಪುಟ್ಟ ಪಟ್ಟಣದವರು. ಗ್ರಾಮಾಂತರ ಭಾಗದ ಪ್ರತಿಭಾನ್ವಿತರಿಗೆ ಸೌಲಭ್ಯಗಳು ಸಿಗುತ್ತಿಲ್ಲ ಎನ್ನುವ ಕೊರಗು ಅವರಿಗಿದೆ. ಆದರೆ, ಯಾವ ಕೊರತೆಗಳೂ ನಮ್ಮ ಸಾಧನೆಗೆ ಅಡ್ಡಿಯಾಗಬಾರದು ಎಂದು ಅವರು ಐಎಎಸ್ ಕನಸು ಕಾಣುತ್ತಿರುವವರಿಗೆ ಸಲಹೆ ನೀಡುತ್ತಾರೆ.

'ಗ್ರಾಮೀಣ ಆರೋಗ್ಯ ಸುಧಾರಣೆ ಮಾಡಬೇಕು ಎಂಬುದು ನನ್ನ ಕನಸು. ಹಳ್ಳಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಬಯಕೆಯೂ ಇದೆ. ನಾಗರಿಕ ಸೇವಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡ ಮೇಲೆ ಎಲ್ಲ ಕ್ಷೇತ್ರಗಳಲ್ಲೂ ಕೆಲಸ ಮಾಡಬೇಕಾಗುತ್ತದೆ. ಹಳ್ಳಿಗರ ಆರೋಗ್ಯ ಮತ್ತು ಶಿಕ್ಷಣ ಸುಧಾರಣೆಯಾದರೆ ಉಳಿದ ಎಲ್ಲದರಲ್ಲೂ ಅವರು ಸಶಕ್ತರಾಗುತ್ತಾರೆ. ಹೀಗಾಗಿ ನನ್ನ ವೃತ್ತಿ ಜೀವನದಲ್ಲಿ ಗ್ರಾಮೀಣ ಆರೋಗ್ಯಕ್ಕೇ ಹೆಚ್ಚು ಒತ್ತು ನೀಡುತ್ತೇನೆ' ಎನ್ನುತ್ತಾರೆ ಸಾಹಿತ್ಯ.

ಬೀದರ್‌ನ ವಿನಯಕುಮಾರ್ ಗಾದಗೆ, ಕೊಪ್ಪಳದ ಅಪೂರ್ವ ಬಾಸೂರು, ವಿಜಯಪುರದ ನಿಖಿಲ್ ಪಾಟೀಲ, ಸವಿತಾ ಗೋಟ್ಯಾಳ, ಬೈಲಹೊಂಗಲದ ಸಾಹಿತ್ಯ ಆಲದಕಟ್ಟಿ, ಹೊನ್ನಾವರದ ದೀಪಕ್ ಶೇಟ್, ಬೆಳಗಾವಿಯ





ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ ಬಹುತೇಕರ ತಯಾರಿಯ ಮೇಲೆ ಕಣ್ಣು ಹಾಯಿಸಿದಾಗ ಎದ್ದು ಕಾಣುವುದು ಅವರು ಪತ್ರಿಕೆಗಳನ್ನು ತುಂಬಾ ಗಂಭೀರವಾಗಿ ಓದುತ್ತಿದ್ದರು ಎನ್ನುವುದು. ವಿಷಯಗಳ ವಿಶ್ಲೇಷಣೆಗೆ, ಸಮಕಾಲೀನ ವಿಷಯಗಳ ತಿಳಿವಿಗೆ ಪತ್ರಿಕೆಗಳ ಓದು ತುಂಬಾ ಮುಖ್ಯ ಎನ್ನುವುದು ಬಹುತೇಕರು ಹೇಳುವ ಮಾತು.